ಈ) ಸುಮಾರು 173 ಎಕರೆಯಷ್ಟು ಫ್ಯಾಕ್ಟರಿ ಭೂಮಿ, ಕಟ್ಟಡಗಳು ಹಾಗೂ ಯಂತ್ರೋಪಕರಣಗಳು ಇವೆ.

ಉ) ನೂತೆನ ವಿದ್ಯುತ್ ಕಾರ್ಖಾನೆಯನ್ನು ಈಗಾಗಲೇ ಮುಚ್ಚಲಾಗಿದ್ದು, ಕರ್ನಾಟಕ ಉಚ್ಚ ನ್ಯಾಯಾಲಯವು ಅಧಿಕೃತ ಸಮಾಪಕರನ್ನು (Official Liquidator) ನೇಮಿಸಿದ ಹಾಗೂ ಸದರಿ ಕಾರ್ಖಾನೆ ನ್ಯಾಯಾಲಯದ ವಶದಲ್ಲಿದೆ. ಮಾಹಿತಿಯನ್ನು ಪಡೆದು ನೀಡಬೇಕಾಗಿದೆ. ಇದಕ್ಕೆ ಸಾಕಷ್ಟು ಕಾಲಾವಕಾಶ ಬೇಕಾಗಿದೆ. ಆದುದರಿಂದ ಈ ಮಾಹಿತಿ ಕೂಡಲೇ ಲಭ್ಯವಿಲ್ಲ.

4692 (4502) ಶ್ರೀ ಯೋಗೀಶ್ ಭಟ್.ಎನ್. (ಮಂಗಳೂರು) :- ಮಾನ್ಯ ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಸರ್ಕಾರ ಎಲ್ಲಾ ಉದ್ಯಮಗಳಿಗೂ ಸಮಾನ ಆದ್ಯತೆ ನೀಡಲು ಮುಂದಾಗಿದೆಯೇ;

ಆ) ಹಾಗಿದ್ದಲ್ಲಿ, ಕೋಳಿ ಸಾಕಾಣಿಕೆ ಉದ್ಯಮಸ್ಥಿತಿ ಚಿಂತಾಜನಕವಾಗಿರಲು ಕಾರಣಗಳೇನು;

ಇ) ನಾಲ್ಕನೇ ಅತಿ ದೊಡ್ಡ ಉದ್ಯಮವಾದ ಕೋಳಿಸಾಕಣಿ ಕ್ಷೇತ್ರದ ಬಗ್ಗೆ ಸರ್ಕಾರ ನಿರಾಸಕ್ತಿ ವಹಿಸಿತ್ತಿರುವುದೇಕೆ;

ಈ) ಕುಕ್ಕುಟೋದ್ಯಮದ ಅಭಿವೃದ್ಧಿಗೆ ಸರ್ಕಾರದ ಯೋಜನೆಗಳೇನು;

ಉ) ಇವುಗಳಿಗೆ ನೀಡಿದ ಸಹಾಯಧನ ಮೊತ್ತ ಎಷ್ಟು (ಜಿಲ್ಲಾವಾರು ಮಾಹಿತಿ);

ಊ) ಈ ಸಹಾಯಧನವನ್ನು ನೀಡದಿರುವುದು ನಿಜವೇ; ಕೃಷಿ ಆಧಾರಿತ ಉದ್ಯಮವಾದ ಕೋಳಿ ಸಾಕಾಣಿಕೆ ಕ್ಷೇತ್ರಕ್ಕೆ ಸರ್ಕಾರ ವಿದ್ಯುತ್ ಶುಲ್ಕ ವಿನಾಯ್ತಿ, ಇತ್ಯಾದಿ ಕ್ರಮದ ಕುರಿತು ಯಾವ ಕ್ರಮ ಕೈಗೊಳ್ಳುವುದು?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು) :

ಅ) ಹೌದು.

ಆ) ಕೋಳಿ ಸಾಕಾಣಿಕೆ ಕ್ಷೇತ್ರ ಚಿಂತಾಜನಕವಾಗಿರುವುದಿಲ್ಲ.

ಇ) ಕೋಳಿ ಸಾಕಾಣಿಕೆ ಕ್ಷೇತ್ರದ ಬಗ್ಗೆ ಸರ್ಕಾರ ನಿರಾಸಕ್ತಿ ಹೊಂದಿಲ್ಲ. ಪಶು ಪಾಲನಾ ಮತ್ತು ಪಶು ವೈದ್ಯ ಸೇವಾ ಇಲಾಖೆಯಿಂದ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಈ) ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯು ಕುಕ್ಕುಟೋದ್ಯಮದ ಅಭಿವೃದ್ಧಿಗೆ ಹೂಡಿರುವ ಒಟ್ಟು ಸ್ಥಿರಾಸ್ತಿಯ ಮೇಲೆ 1996 ರಿಂದ 2001ನೇ ವರೆಗೂ ಜಾರಿಯಲ್ಲಿದ್ದ ಕೈಗಾರಿಕಾ ನೀತಿಯನುಸಾರ ಶೇ.25 ಸಹಾಯಧನ ಮಂಜೂರು ಮಾಡುತ್ತಿದ್ದು 2001–06ನೇ ಸಾಲಿನ ಹೊಸ ಕೈಗಾರಿಕ ನೀತಿಯನ್ವಯ ಕೋಳಿ ಸಾಕಾಣಿಕೆಗೆ ಸಹಾಯಧನ ಮಂಜೂರಾತಿಯನ್ನು ರದ್ದು ಪಡಿಸಲಾಗಿದೆ.

ಪಶುಸಂಗೋಪನೆ ಮತ್ತು ಪಶುವೈದ್ಯ ಇಲಾಖೆಯಿಂದ ಹಲವಾರು ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು, ಕರ್ನಾಟಕ ಸಹಕಾರ ಕುಕ್ಕಟ ಮಹಾಮಂಡಳಿಯ ಮೂಲಕ ಇದುವರೆಗೂ 67 ಕುಕ್ಕಟ ಸಹಕಾರ ಸಂಘಗಳನ್ನು ರಚಿಸಲಾಗಿದೆ. ಈ ಪೈಕಿ 7 ಕುಕ್ಕಟ ಸಹಕಾರ ಸಂಘಗಳಿಗೆ ರಾಷ್ಟ್ರೀಯ ಸಹಕಾರಿ ಅಭಿವೃದ್ಧಿ ನಿಗಮದಿಂದ 47.80 ಲಕ್ಷ ರೂ.ಗಳ ಶೇರು ಬಂಡವಾಳ ನೀಡಲಾಗಿದೆ. ರೋಗೋದ್ರೇಕದ ಸಮಯದಲ್ಲಿ ಕೋಳಿ ರೋಗ ತಪಾಸಣೆಯ ಸೌಲಭ್ಯವನ್ನು ಇಲಾಖೆಯಿಂದ ರೈತರಿಗೆ ಒದಗಿಸಲಾಗುತ್ತಿದೆ. ಹಾಗೂ ತರಬೇತಿ ನೀಡಲಾಗುತ್ತಿದೆ. ಗಿರಿರಾಜ ಕೋಳಿ ಮರಿಗಳನ್ನು ಇಲಾಖೆಯು ಕೋಳಿ ಮರಿ ಸಾಕಾಣಿಕೆ ಕೇಂದ್ರಗಳ ಮೂಲಕ ಸರ್ಕಾರ ನಿಗದಿಪಡಿಸಿದ ದರದಂತೆ ರೈತರಿಗೆ, ಸ್ವಸಹಾಯ ಗುಂಪುಗಳಿಗೆ ವಿತರಿಸಲಾಗುತ್ತದೆ. ಗಿರಿರಾಜ ಕೋಳಿ ಮರಿಗಳ ಉತ್ಪಾದನೆಯನ್ನು ಹೆಚ್ಚಿಸಲು ಪ್ರಾದೇಶಿಕ ಕುಕ್ಕಟ ಕ್ಷೇತ್ರಕ್ಕೆ ರೂ.55 ಲಕ್ಷ ಅನುದಾನವನ್ನು ಕೇಂದ್ರ ಸರ್ಕಾರದಿಂದ ಪಡೆದು ಕ್ಷೇತ್ರದ ಅಭಿವೃದ್ಧಿಪಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಉ) ದಿನಾಂಕ 1–1–99 ರಿಂದ 31–3–2003 ರವರೆಗೂ ಒಟ್ಟು 2397 ಕೋಳಿ ಸಾಕಾಣಿಕೆ ಘಟಕಗಳಿಗೆ ರೂ.7663.51 ಲಕ್ಷ ಸಹಾಯಧನ ಮಂಜೂರು ಮಾಡಲಾಗಿದ್ದು ಇದರಲ್ಲಿ 260 ಘಟಕಗಳಿಗೆ ಮಂಜೂರಾದ ಸಹಾಯಧನದಲ್ಲಿ ಶೇ.50ರಂತೆ ಒಟ್ಟು ರೂ.493.15 ಲಕ್ಷ ಸಹಾಯಧನ ಬಿಡುಗಡೆ ಮಾಡುವುದು. ಬಾಕಿ ಸಹಾಯಧನ ಬಿಡುಗಡೆ ಮಾಡಲು ಸರ್ಕಾರದ ಪರಿಶೀಲನೆಯಲ್ಲಿದೆ.

ಊ) ನಿಜ. ಕೋಳಿಸಾಕಾಣಿಕೆ ಕ್ಷೇತ್ರಕ್ಕೆ ವಿದ್ಯುತ್ ಶುಲ್ಕ ವಿನಾಯಿತಿ ನೀಡುವ ಬಗ್ಗೆ ಸರ್ಕಾರದಲ್ಲಿ ಯಾವುದೇ ಪ್ರಸ್ತಾವನೆ ಇರುವುದಿಲ್ಲ.

DISTRICT WISE PENDANCY OF SUBSIDY FROM 1-1-1999 TO 31-03-2003 (POULTRY UNITS ONLY) AMOUNT IN LAKH RS.

Sl.No	District	Unit	Sanctioned	Units	Released	Balance
1	BAGALKOTE	100	161.33		0.00	161.33
2	BANGALORE	162	742.96	4	3.79	739.17
3	BANGALORE RURAL	488	1934.97	27	54.22	1880.75
4	BELGAUM	81	80.74	1	0.94	79.80
5	BELLARY	108	654.81	17	97.79	557.02
6	BIDAR	7	10.61		0.00	10.61
7	BIJAPUR	41	75.34	6	7.57	67.76
8	CHAMARAJANAGAR	9	8.55	3	1.35	7.20
9	CHICKMAGALUR	36	37.42	10	4.69	32.73
10	CHITRADURGA	78	223.03	12	15.49	207.54
11	DAKSHINA KANNADA	16	53.10	3	7.53	45.56
12	DAVANAGERE	37	237.27		0.00	237.27
13	DHARWAD	36	149.82	9	28.36	121.46
14	GADAG	16	31.41	2	1.65	29.76
15	GULBARGA	1	3.41	1	1.70	1.70
16	HASSAN	50	101.74	11	5.53	96.20
17	HAVERI	27	50.54	7	6.39	44.15
18	KODAGU	2	4.64	1	1.16	3.48
19	KOLAR	450	1195.85	45	56.31	1139.54
20	KOPPAL	81	645.94	14	61.48	584.46
21	MANDYA	96	117.54	9	7.87	109.67
22	MYSORE	113	529.48	21	50.32	470.69
23	RAICHUR	11	35.12	3	13.01	22.11
24	SHIMOGA	37	47.80	2	1.26	46.54
25	TUMKUR	112	195.96	17	15.52	180.44
26	UDUPI	38	81.91	5	9.51	72.40
27	UTTARA KANNADA	174	252.24	30	39.69	212.55
	TOTAL	2397	7663.51	260	493.15	7161.89